**ದಿನಾಂಕಃ 07.02.2023 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ ಪ್ರತಿವಾದಿ ಪರ ಶ್ರೀ ಡಿ.ಜಿ.ಜಿ. ವಕೀಲರಿಂದಃ–**

ರಾಮಕೃಷ್ಣ ರೆಡ್ಡಿ ಮತ್ತು ಅವರ ಕುಟುಂಬದವರು ನನಗೆ ಸುಮಾರು 40–50 ವರ್ಷದಿಂದ ಪರಿಚಯ ಇರುತ್ತಾರೆ. ರಾಮಕೃಷ್ಣ ರೆಡ್ಡಿ ಮತ್ತು ಅವರ ಕುಟುಂಬಕ್ಕೆ ಏನೇನು ಆಸ್ತಿಗಳು ಇರುತ್ತವೆ ಎಂದು ತಿಳಿದುಕೊಂಡಿರುತ್ತೇನೆ. ಸರ್ವೆ ನಂಬರ್ಃ 2 ರ ಜಮೀನನ್ನು ನಾನು ನೋಡಿದ್ದು ಅದು ಒಟ್ಟು 3 ಎಕರೆ ಇರುತ್ತದೆ. ಸರ್ವೆ ನಂಬರ್ಃ 2 ರ ಜಮೀನಿಗೆ ಹೊಂದಿಕೊಂಡು ನನ್ನ ಜಮೀನು ಇರುವುದಿಲ್ಲ ಆದರೆ ಸ್ವಲ್ಪ ದೂರದಲ್ಲಿ ಇರುತ್ತದೆ.

ಸರ್ವೆ ನಂಬರ್ಃ 2 ರ ಜಮೀನಿನ ಪೂರ್ವಕ್ಕೆ– ರಸ್ತೆ ಇರುತ್ತದೆ. ಪಶ್ಚಿಮಕ್ಕೆ– ಜುಂಜಣ್ಣನವರ ಜಮೀನು ಇರುತ್ತದೆ. ಉತ್ತರಕ್ಕೆ– ಹನುಮಂತಪ್ಪನವರ ಜಮೀನು ಇರುತ್ತದೆ. ದಕ್ಷಿಣಕ್ಕೆ ಕರಿಬಸಣ್ಣನವರ ಜಮೀನು ಇರುತ್ತದೆ. ರಾಮಕೃಷ್ಣರೆಡ್ಡಿಯವರು ಸರ್ವೆ ನಂಬರ್ಃ 2 ರಲ್ಲಿ ಜಮೀನು ಖರೀದಿಸಿರುತ್ತಾರೆ ಎಂದು ಹೇಳಿದ್ದು ಅವರು ಖರೀದಿ ಮಾಡುವ ಸಮಯದಲ್ಲಿ ನಾನು ಅವರ ಜೊತೆ ಇರಲಿಲ್ಲ. ಖರೀದಿಸಿದ ನಂತರ ತಿಳಿದಿರುತ್ತದೆ. ಅವರು ಯಾವಾಗ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ರಾಮಕೃಷ್ಣರೆಡ್ಡಿಯವರು ಸದರಿ ಜಮೀನನ್ನು ಸಿದ್ದಮ್ಮನವರಿಂದ ಖರೀದಿಸಿರುತ್ತಾರೆ. ರಾಮಕೃಷ್ಣ ರೆಡ್ಡಿಯವರು ಜಮೀನು ಖರೀದಿಸಿ ಎಷ್ಟು ವರ್ಷಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ರಾಮಕೃಷ್ಣ ರೆಡ್ಡಿಯವರು ಖರೀದಿ ಮಾಡುವ ಮೊದಲು ಸರ್ವೆ ನಂಬರ್ಃ 2 ನ್ನು ಬೇರೆ ಯಾರಾದರೂ ಖರೀದಿ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ನನಗೆ ಪಿಟ್ಲಾಲಿಯ ದೊರೆಸ್ವಾಮಿ, ಪಿ.ಕೆ. ವಿಠ್ಠಲ್ ಮತ್ತು ಪುಂಡಲೀಕಾಕ್ಷ ರವರ ಪರಿಚಯ ಇರುತ್ತದೆ. ಇವರು ಕಾವಲ್ ರಂಗೇಗೌಡರ ಮಕ್ಕಳು ಎಂದರೆ ಸರಿ. ಈಗ ಪಿ.ಕೆ. ವಿಠ್ಠಲ್ ಮತ್ತು ದೊರೆಸ್ವಾಮಿಯವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ನನಗೆ 6 ಮತುತ 7 ನೇ ಪ್ರತಿವಾದಿಯರ

ಪರಿಚಯ ಇರುತ್ತದೆ. 6 ಮತ್ತು 7 ನೇ ಪ್ರತಿವಾದಿಯರ ಮನೆ ರಸ್ತೆಗೆ ಹೊಂದಿಕೊಂಡು ಇರುತ್ತದೆ. ರಾಮಕೃಷ್ಣರೆಡ್ಡಿಯವರ ಮನೆಯಿಂದ ಉತ್ತರಕ್ಕೆ ಬರುತ್ತದೆ. ಸರ್ವೆ ನಂಬರ್ಃ 2 ರಲ್ಲಿಯೇ 6 ಮತ್ತು 7 ನೇ ಪ್ರತಿವಾದಿಯರ ಮನೆ ಬರುತ್ತದೆ ಎಂದರೆ ಸರಿಯಲ್ಲ. ಅವರ ಮನೆ ರಸ್ತೆಯ ಪಕ್ಕಕ್ಕೆ ಬರುತ್ತದೆ ಎಂದು ಹೇಳುತ್ತಾರೆ.

ದೊರೆಸ್ವಾಮಿ, ಪಿ.ಕೆ. ವಿಠ್ಠಲ್ ಮತ್ತು ಪುಂಡಲೀಕಾಕ್ಷ ಇವರು 1964 ರಲ್ಲಿಯೇ ಸರ್ವೆ ನಂಬರ್ಃ 2 ರಲ್ಲಿ 6 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1974 ರಲ್ಲಿ ಅದೇ ಜಮೀನಿನಲ್ಲಿ ಪೂರ್ವ–ಪಶ್ಚಿಮ 12 ½ ಗಜ ಮತ್ತು ಉತ್ತರ–ದಕ್ಷಿಣ 33 ಗಜ ಜಾಗವನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರಾಮಕೃಷ್ಣರೆಡ್ಡಿಯವರ ಮನೆ ಮತ್ತು ರಂಗನಾಥಪುರ ರಸ್ತೆಯ ಮಧ್ಯದಲ್ಲಿ 6 ಮತ್ತು 7 ನೇ ಪ್ರತಿವಾದಿಯರ ಮನೆ ಇರುತ್ತದೆ ಎಂದರೆ ಸರಿಯಲ್ಲ. ನಿಡಿ–1 ಮತ್ತು 2 ರಲ್ಲಿ ಕಾಣುತ್ತಿರುವ ರಸ್ತೆಯು ರಂಗನಾಥಪುರ ರಸ್ತೆ ಎಂದರೆ ಸರಿ. ಸದರಿ ಭಾವಚಿತ್ರದಲ್ಲಿ ಕಾಣುತ್ತಿರುವ ಶೆಡ್‌ಗಳು 6 ಮತ್ತು 7 ನೇ ಪ್ರತಿವಾದಿಯರ ಶೆಡ್‌ಗಳು ಎಂದರೆ ಸರಿ. ನಿಡಿ–3 ರಲ್ಲಿ ಕಾಣುತ್ತಿರುವ ಮನೆ ರಾಮಕೃಷ್ಣರೆಡ್ಡಿಯವರ ಮನೆ ಎಂದರೆ ಸರಿ. ನಿಡಿ–6 ರಲ್ಲಿ ಕಾಣುತ್ತಿರುವ ಹುಸಣೇ ಮರದ ಮುಂದೆ ಇರುವ ಮನೆ 6 ನೇ ಪ್ರತಿವಾದಿಯ ಮನೆಯಾಗಿದ್ದು ಅವರ ಮನೆಯ ಹಿಂದುಗಡೆ ರಾಮಕೃಷ್ಣರೆಡ್ಡಿಯವರ ಮನೆ ಬರುತ್ತದೆ ಎಂದರೆ ಸರಿ.

ದೊರೆಸ್ವಾಮಿ, ಪಿ.ಕೆ. ವಿಠ್ಠಲ್ ಮತ್ತು ಪುಂಡಲೀಕಾಕ್ಷ ರವರು 1964 ರಿಂದಲೇ ದಾವಾ ಆಸ್ತಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ವಾದಿಯರ ನಿವೇಶನದ ಮುಂದುಗಡೆ ಅವರು ವಾಸವಾಗಿರುತ್ತಾರೆ ಎಂದು ಹೇಳುತ್ತಾರೆ. ದೊರೆಸ್ವಾಮಿ ಮತ್ತು ಪಿ.ಕೆ. ವಿಠ್ಠಲ್ ಅವರು ಈಗ ಭಾವಚಿತ್ರದಲ್ಲಿ ನೋಡಿದ ಮನೆಯಲ್ಲಿಯೇ ವಾಸವಾಗಿದ್ದು ಅಲ್ಲಿಯೇ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಬೇರೆ ಮನೆಯಲ್ಲಿದ್ದರು. ದೊರೆಸ್ವಾಮಿ, ಪಿ.ಕೆ.

ವಿಠ್ಠಲ್ ಮತ್ತು ಪುಂಡಲೀಕಾಕ್ಷ ರವರು ರಾಮಕೃಷ್ಣರೆಡ್ಡಿಯವರು ಖರೀದಿಸಿರುವ ಮೊದಲೇ 9 ½ ಗುಂಟೆ ಜಮೀನನ್ನು ಖರೀದಿಸಿ ಅದರ ಅನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂಬರ್‌ಃ2 ರಲ್ಲಿ ಕೇವಲ 30 ½ ಗುಂಟೆ ಜಮೀನು ಮಾತ್ರ ಉಳಿದಿದ್ದು ರಾಮಕೃಷ್ಣರೆಡ್ಡಿಯವರು ತಮ್ಮ ಕ್ರಯಪತ್ರದಲ್ಲಿ 1 ಎಕರೆ ಜಮೀನು ಎಂದು ಸುಳ್ಳಾಗಿ ಬರೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದೊರೆಸ್ವಾಮಿ, ಪಿ.ಕೆ. ವಿಠ್ಠಲ್ ಮತ್ತು ಪುಂಡಲೀಕಾಕ್ಷ ಇವರ ಕುಟುಂಬದವರು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿ ವಿಚಾರಣೆಯಾದ ಬಳಿಕ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ರಾಮಕೃಷ್ಣರೆಡ್ಡಿಯವರ ಮರಣಾನಂತರ ಸರ್ವೆ ನಂಬರ್‌ಃ 2 ರ ಜಮೀನು ಅವರ ಹೆಂಡತಿ ಲಕ್ಷ್ಮೀದೇವಿಯವರಿಗೆ ಕೇವಲ 30 ½ ಗುಂಟೆ ಜಮೀನಿಗೆ ಮಾತ್ರ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ

ರಾಮಕೃಷ್ಣರೆಡ್ಡಿಯವರು ಖರೀದಿಸಿದ 1 ಎಕರೆ ಜಮೀನಿನ ಪೂರ್ವಕ್ಕೆ– ಕರಿಬಸಣ್ಣನವರ ಜಮೀನು ಇರುತ್ತದೆ. ಪಶ್ಚಿಮಕ್ಕೆ– ಪಿ.ಡಬ್ಲ್ಯೂಡಿ ರಸ್ತೆ, ಉತ್ತರಕ್ಕೆ– ಹುಣಸೇಮರಗಳು, ದಕ್ಷಿಣಕ್ಕೆ– ಹನುಮಂತಪ್ಪನವರ ಜಮೀನು ಇರುತ್ತದೆ. ಸರ್ವೆ ನಂಬರ್‌ಃ2 ರಲ್ಲಿ ರಾಮಕೃಷ್ಣರೆಡ್ಡಿಯವರಿಗೆ 30 ½ ಗುಂಟೆ ಜಮೀನನ್ನು ಹೊರತುಪಡಿಸಿ ಬೇರೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸರ್ವೆ ನಂಬರ್‌ಃ 2 ನ್ನು ನೋಡದೇ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೂ ನಮಗೂ ಯಾವುದೇ ಸಂಬಂಧ ಇರುವುದಿಲ್ಲ. ನನಗೆ ದಾವೆಯ ಮತ್ತು ದಾವಾ ಆಸ್ತಿಯ ಬಗ್ಗೆ ಯಾವುದೇ ವಿಷಯ ತಿಳಿಯದೇ ಇದ್ದರೂ ಸಹ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್‌ಃ2 ರಲ್ಲಿ 9 ½ ಗುಂಟೆ ಜಮೀನಿನಲ್ಲಿ ಕಾವಲು ರಂಗೇಗೌಡ ರವರ ಕುಟುಂಬದವರೇ ವಾಸಿಸುತ್ತಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.